ಕರ್ನಾಟಕ ಸರ್ಕಾರ
(ಸಹಕಾರ ಇಲಾಖೆ)

# ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52.

ಸಂಖ್ಯೆ: ಎನ್ಎಂಎಲ್-2/ವೈಎಂಸಿ/62/2017-18 ದಿನಾಂಕ: 04-10-2017
11

## ಸುತ್ತೋಲೆ ಸಂಖ್ಯೆ:- 264

ವಿಷಯ:- ಚೀಟಿ ವ್ಯವಹಾರ ನಡೆಸಲು ಅನುಮತಿ ನೀಡಿದ ನಂತರದ ಪ್ರಕ್ರಿಯೆ ಕುರಿತು.

---

ಚೀಟಿ ನಿಧಿ ಕಾಯ್ದೆ 1982 ರ ಪ್ರಕರಣ 19(1) ರಡಿ ಚೀಟಿ ವ್ಯವಹಾರ ನಡೆಸಲು ಅನುಮತಿ ಪಡೆಯುವುದು ಕಡ್ಡಾಯವಾಗಿದೆ.

ಈ ರೀತಿ ಚೀಟಿ ವ್ಯವಹಾರ ನಡೆಸಲು ಅನುಮತಿ ಪಡೆದ ತರುವಾಯ ಅನುಸರಿಸಬೇಕಾದ ವಿಧಿವಿಧಾನಗಳು ವಿಧಿಬದ್ದ ಕ್ರಮಗಳ ಬಗ್ಗೆ ಚೀಟಿ ನಿಧಿ ಕಾಯ್ದೆ 1982 ಹಾಗೂ ನಿಯಮಾವಳಿಗಳು 1983 ರಲ್ಲಿ ಸ್ಪಷ್ಟವಾಗಿದೆ.

ಆದರೆ ರಾಜ್ಯದಲ್ಲಿರುವ ಕೆಲವು ಚೀಟಿ ಸಂಸ್ಥೆಗಳು ಹಾಗೂ ವ್ಯಕ್ತಿಗಳು ಅನುಮತಿ ಪಡೆಯದೇ ಅನಧಿಕೃವಾಗಿ ಚೀಟಿ ವ್ಯವಹಾರ ನಡೆಸುತ್ತಿರುವುದು ಕಂಡು ಬಂದಿದೆ.

ಕೆಲವು ಸನ್ನಿವೇಶಗಳಲ್ಲಿ ಪ್ರಕರಣ 19(1) ರಡಿ ಅನುಮತಿ ಪಡೆದ ನಂತರ ಪ್ರಕರಣ 4 ಹಾಗೂ ಪ್ರಕರಣ 9 ರ ಪ್ರಕಾರ ಸಕ್ಷಮ ಪ್ರಾಧಿಕಾರದಿಂದ ಪೂರ್ವ ಮಂಜೂರಾತಿ ಹಾಗೂ ಪ್ರಾರಂಭಿಕ ದೃಡೀಕರಣ ಪಡೆಯದೇ ಚೀಟಿ ವ್ಯವಹಾರ ನಡೆಸುತ್ತಿರುವ ಪ್ರಕರಣಗಳು ವರದಿಯಾಗುತ್ತಿವೆ. ಇದು ಅಧಿನಿಯಮದ ಉಲ್ಲಂಘನೆಯಾಗುತ್ತದೆ.

ಈ ಕಛೇರಿಯಿಂದ, ಚೀಟಿ ಅಧಿನಿಯಮ 1982 ರ ಪ್ರಕರಣ 19(1) ರನ್ವಯ ಅನುಮತಿ ನೀಡಿ ಹೊರಡಿಸುವ ಆದೇಶದಲ್ಲಿ ಚೀಟಿ ಅಧಿನಿಯಮ 1982 ಹಾಗೂ ನಿಯಮಾವಳಿಗಳು 1983 ಪಾಲಿಸಬೇಕೆಂಬ ಷರತ್ತುಗಳನ್ನು ವಿಧಿಸಲಾಗುತ್ತಿದೆ. ಅಲ್ಲದೇ ಆರು ತಿಂಗಳೊಳಗೆ ಚೀಟಿ ವ್ಯವಹಾರ ನಡೆಸದಿದಲ್ಲಿ ಸ್ವಯಂ ಚಾಲಿತವಾಗಿ ನೀಡಿದ ಅನುಮತಿ ರದ್ದುಗೊಳ್ಳುತ್ತದೆ ಎಂಬ ಷರತ್ತನ್ನು ಸಹ ವಿಧಿಸಲಾಗುತ್ತಿದೆ.

ಈ ರೀತಿ ನೀಡಿದ ಅನುಮತಿ ಆದೇಶದಲ್ಲಿ ಸಹ ಷರತ್ತುಗಳನ್ನು ನಮೂದಿಸಿ ಕ್ಷೇತ್ರಿಯ ಅಧಿಕಾರಿಗಳಿಗೆ ಕಳುಹಿಸಲಾಗುತ್ತಿದೆ. ಆದರೆ ಆದೇಶವನ್ನು ಸಂಬಂಧಪಟ್ಟ ಕ್ಷೇತ್ರಿಯ ಅಧಿಕಾರಿಗಳು ಗಮನಿಸುತ್ತಿಲ್ಲ. ಚೀಟಿ ಸಂಸ್ಥೆಗಳು/ವ್ಯಕ್ತಿಗಳು ಚೀಟಿ ವ್ಯವಹಾರ ಪ್ರಾರಂಭಿಸಿವೆಯೇ? ಪೂರ್ವ ಮಂಜೂರಾತಿ ಹಾಗೂ ಪ್ರಾರಂಭಿಕ ದೃಢೀಕರಣ ಪತ್ರವನ್ನು ಪಡೆದಿವೆಯೇ? ಎಂಬುದನ್ನು ಪರಿಶೀಲಿಸಲಾಗುತ್ತಿಲ್ಲ. ತತ್ಪರಿಣಾಮವಾಗಿ ಕಾನೂನಿಗೆ ವಿರುದ್ದವಾಗಿ ಚೀಟಿ ವ್ಯವಹಾರ ನಡೆಸಲು ಅವಕಾಶ ಉಂಟಾಗುತ್ತದೆ.

ಮೇಲಿನ ಅಂಶವನ್ನು ಇಲಾಖೆಯ ಸಂಬಂಧಪಟ್ಟ ಕ್ಷೇತ್ರೀಯ ಅಧಿಕಾರಿಗಳು ಮನಗಾಣತಕ್ಕದ್ದು.

ಇನ್ನುಮುಂದೆ, ಈ ಕಛೇರಿಯಿಂದ ಚೀಟಿ ವ್ಯವಹಾರ ನಡೆಸಲು ನೀಡಿದ ಆದೇಶದ ಪ್ರಕಾರ ಇಲಾಖೆಯ ಸಂಬಂಧಪಟ್ಟ ಕ್ಷೇತ್ರೀಯ ಅಧಿಕಾರಿಗಳು, ಪ್ರತಿ ಚೀಟಿ ಸಂಸ್ಥೆ/ವ್ಯಕ್ತಿಗಳು ಚೀಟಿ ವ್ಯವಹಾರ ನಡೆಸುವ ಪೂರ್ವದಲ್ಲಿ ಪೂರ್ವ ಮಂಜೂರಾತಿ ಹಾಗೂ ಪ್ರಾರಂಭಿಕ ದೃಢೀಕರಣ ಪತ್ರವನ್ನು ಪಡೆದು ಕಾನೂನು ಪಾಲನೆ ಮಾಡುತ್ತಿವೆಯೇ ಎಂಬುದರ ವಿವರಗಳ ಬಗ್ಗೆ ಮನದಟ್ಟು ಮಾಡಿಕೊಂಡು ಈ ಕಛೇರಿಗೆ ವರದಿ ಸಲ್ಲಿಸತಕ್ಕದ್ದು. ಒಂದು ವೇಳೆ ಕಾನೂನು ವಿರುದ್ದವಾಗಿ ಕಾರ್ಯನಿರ್ವಹಿಸುತ್ತಿದ್ದಲ್ಲಿ, ಅಂತಹ ಸಂಸ್ಥೆಯ ವಿರುದ್ದ ಕಾನೂನು ಕ್ರಮ ಜರುಗಿಸಲು ಚೀಟಿ ನಿಬಂಧಕರಿಗೆ ಪ್ರಸ್ತಾವೆ ಸಲ್ಲಿಸತಕ್ಕದ್ದು.

ಒಟ್ಟಾರೆ, ರಾಜ್ಯದಲ್ಲಿ ಅನಧಿಕೃತ ಚೀಟಿ ವ್ಯವಹಾರ ನಡೆಯದಂತೆ ತಡೆಯುವ ಹಾಗೂ ಅನಧಿಕೃತವಾಗಿ ಚೀಟಿ ವ್ಯವಹಾರ ನಡೆಸುತ್ತಿರುವವರ ವಿರುದ್ದ ಸೂಕ್ತ ಕ್ರಮ ಕೈಗೊಂಡು ಹಾಗೂ ಚೀಟಿ ಸಂಸ್ಥೆಗಳು ಕಾನೂನು ಪಾಲನೆ ಮಾಡುತ್ತಿವೆಯೇ ಎಂಬ ಬಗ್ಗೆ ಖಾತರಿಪಡಿಸಿಕೊಂಡು ಪ್ರತಿ ತ್ರೈಮಾಸಿಕ ವರದಿಯನ್ನು ಚೀಟಿ ನಿಬಂಧಕರಿಗೆ ಸಲ್ಲಿಸತಕ್ಕದ್ದು.

ಈ ಮೇಲಿನ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ಸಹಕಾರ ಸಂಘಗಳ ನಿಬಂಧಕರು
ಹಾಗೂ ಚೀಟಿ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು

ಗೆ,

1. ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು.
2. ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು.
3. ಎಲ್ಲಾ ಉಪವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು.